| ಅಂಕ: 40 | ದ್ವಿತೀಯಾ ಸಂಕಲನಾತ್ಮಕ ಮೌಲ್ಯಮಾಪನ 2023–24 | ತರಗತಿ:-7 |
|---|---|---|
| ವಿಷಯ : ವಿಜ್ಞಾನ | ಶಾಲೆ– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ | ಸಮಯ:90 |

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.** 4X1=4

1. ಹೃದಯದಿಂದ ರಕ್ತವನ್ನು ದೇಹದ ಎಲ್ಲಾ ಭಾಗಗಳಿಗೆ ಸಾಗಿಸುವುದು ______________
2. ಏಕಮಾನ ಕಾಲದಲ್ಲಿ ಒಂದು ಕಾಯವು ಚಲಿಸಿದ ದೂರವೇ ಅದರ______________
3. ಎರಡು ಅಥವಾ ಹೆಚ್ಚು ವಿದ್ಯುತ್ ಕೋಶಗಳ ಜೋಡಣೆಯನ್ನು______________
4. ಪರದೆಯ ಮೇಲೆ ಪಡೆಯಲಾಗದ ಪ್ರತಿಬಿಂಬವನ್ನು______________ ಎನ್ನುವರು

**II. ಆವರಣದಲ್ಲಿರುವ ಸರಿ ಉತ್ತರವನ್ನು ಆರಿಸಿ ಬರೆಯಿರಿ.** 4X1=4

5. ದಂತವೈದ್ಯರು ಉಪಯೋಗಿಸುವ ದರ್ಪಣ - ಅ)ಪೀನ ಅ)ನಿಮ್ನ ಇ)ಸಮತಲ ಈ)ಪೀನ ಸಮತಲ
6. ಸಸ್ಯಗಳಲ್ಲಿ ನೀರು ಇವುಗಳ ಮೂಲಕ ಸಾಗಿಸಲ್ಪಡುತ್ತದೆ-
 ಅ)ಕ್ಸಲಂ ಅಪ್ಲೋಯಂ ಇ)ಪತ್ರರಂಧ್ರ ಈ)ಬೇರು ರೋಮ
7. ಒಂದು ಸಸ್ಯದ ಪ್ರಜನನ ಭಾಗ - ಅ)ಎಲೆ ಆ) ಕಾಂಡ ಇ)ಬೇರು ಈ)ಹೂವು
8. ಈ ಕೆಳಗಿನವುಗಳಲ್ಲಿ ಯಾವುದು ಕಾಡಿನ ಉತ್ಪನ್ನವಲ್ಲ-
 ಅ)ಹಲಗೆ ಅ)ಅರಗು ಇ)ಸೀಮೆ ಎಣ್ಣೆ ಈ)ಅಂಟು

**III. ಕಳಗಿನ ಜೀವಿಗಳನ್ನು ಅವುಗಳ ಉಸಿರಾಟದ ಅಂಗಗಳೊಂದಿಗೆ ಹೊಂದಿಸಿ ಬರೆಯಿರಿ** 4X1=4

| ಜೀವಿಗಳು | ಉಸಿರಾಟದ ಅಂಗ |
|---|---|
| 9. ಜಿರಲೆ | ಪತ್ರರಂಧ್ರ |
| 10. ಎರೆಹುಳು | ಸ್ಪೈರಕಲ್ |
| 11. ಮೀನು | ಚರ್ಮ |
| 12. ಸಸ್ಯ | ಕಿವಿರುಗಳು |

2023-24

**IV. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ** 8X2=16

13. ಸಮತಲ ದರ್ಪಣ ಉಂಟುಮಾಡುವ ಪ್ರತಿಬಿಂಬದ ಲಕ್ಷಣಗಳನ್ನು ತಿಳಿಸಿ.
14. ಅಂತರ್ಜಲ ಮಟ್ಟವು ಕುಸಿಯಲು ಕಾರಣವಾಗುವ ಅಂಶಗಳನ್ನು ಪಟ್ಟಿಮಾಡಿ
15. ರಕ್ತದ ಘಟಕಗಳು ಯಾವುವು?
16. ಸ್ವಕೀಯ ಪರಾಗಸ್ಪರ್ಶ ಹಾಗೂ ಪರಕೀಯ ಪರಾಗಸ್ಪರ್ಶದ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿ
17. ವಿದ್ಯುತ್ಪ್ರವಾಹದ ಯಾವುದಾದರೂ ಎರಡು ಪರಿಣಾಮಗಳನ್ನು ಹೆಸರಿಸಿ
18. ಎರಡು ನಿಲ್ದಾಣಗಳ ನಡುವಣ ಅಂತರ 240 ಕಿಲೋಮೀಟರ್. ಒಂದು ರೈಲು ಈ ದೂರವನ್ನು ಕ್ರಮಿಸಲು 4 ಗಂಟೆ ತೆಗೆದುಕೊಂಡರೆ, ರೈಲಿನ ಜವವನ್ನು ಲೆಕ್ಕಹಾಕಿ.
19. ಕಾಡಿನಿಂದ ದೊರಕುವ ಐದು ಉತ್ಪನ್ನಗಳನ್ನು ಹೆಸರಿಸಿ
20. ನಿಮ್ನ ದರ್ಪಣದ ಅನ್ವಯಗಳನ್ನು ಪಟ್ಟಿಮಾಡಿ

**V. ವೈಜ್ಞಾನಿಕ ಕಾರಣ ಕೊಡಿ :-** 2X2=4

21. ನೀರನ್ನು ಮಿತವಾಗಿ ಬಳಸಬೇಕು.
22. ಕಾಡುಗಳನ್ನು ಹಸಿರು ಶ್ವಾಸಕೋಶಗಳು ಎನ್ನುವರು.

**VI. ಈ ಕೆಳಗಿನ ಪ್ರಶ್ನೆಗಳಿಗೆ 4-5 ವಾಕ್ಯಗಳಲ್ಲಿ ಉತ್ತರಿಸಿ** 2x4=8

23. ನೈರ್ಮಲ್ಯತೆಗೆ ಸಂಬಂಧಿಸಿದಂತೆ ಸಕ್ರಿಯ ನಾಗರಿಕರಾಗಿ ನಿಮ್ಮ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿ
24. ಮಾನವನ ಹೃದಯದ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ

| ಅಂಕ: 40 | ದ್ವಿತೀಯಾ ಸಂಕಲನಾತ್ಮಕ ಮೌಲ್ಯಮಾಪನ 2023–24 | ತರಗತಿ:-6 |
|---|---|---|
| ವಿಷಯ : ವಿಜ್ಞಾನ | ಶಾಲೆ– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ | ಸಮಯ:90 |

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.** 6X1=6

1. ಕಿವಿಗಳಲ್ಲಿರುವ ಮೃದುವಾದ ಭಾಗವನ್ನು ____________ ಎನ್ನುತ್ತಾರೆ.
2. ಭೂಮಿಯನ್ನು ಆವರಿಸಿರುವ ಗಾಳಿಯ ಪದರವೇ _________________-
3. ನೀರಿನಲ್ಲಿ ವಾಸಿಸುವ ಸಸ್ಯಗಳ ಮತ್ತು ಪ್ರಾಣಿಗಳ ಆವಾಸವನ್ನು ________________ ಎಂದು ಕರೆಯುತ್ತಾರೆ.
4. ವಿದ್ಯುತ್ ಮಂಡಲವನ್ನು ಕಡಿತಗೊಳಿಸಲು ಬಳಸುವ ಸಾಧನ________________ ಎನ್ನುವರು.
5. ಕಾಂತವು ___________ಮತ್ತು ___________ ಧ್ರುವಗಳನ್ನು ಹೊಂದಿರುತ್ತದೆ.
6. ನೀರಾವಿಯು ನೀರಾಗಿ ಬದಲಾಗುವ ಪ್ರಕ್ರಿಯೆಗೆ___________ ಎನ್ನುವರು,

**III. ಆವರಣದಲ್ಲಿ ಸರಿ ಉತ್ತರವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.** 5X1=5

7. ಪರ್ವತ ಪ್ರದೇಶದಲ್ಲಿ ವಾಸಿಸುವ ಪ್ರಾಣಿ-________
   *a)ಚಮರೀಮೃಗ b)ಹಿಮಕರಡಿ c)ಸಿಂಹ d)ಒಂಟೆ*
8. ಇದು ಸ್ವಯಂಪ್ರಕಾಶ ವಸ್ತು________ *a)ಸೂರ್ಯ b) ನಕ್ಷತ್ರ c)ಚಂದ್ರ d)ಭೂಮಿ*
9. ಇದನ್ನು ಕಾಂತವನ್ನು ತಯಾರಿಸಲು ಬಳಸುತ್ತಾರೆ ________
   *a)ಪ್ಲಾಸ್ಟಿಕ್ b) ಚಿನ್ನ c)ಗಾಜು d)ಕಬ್ಬಿಣ*
10. ಉದ್ದದ ಅಂತಾರಾಷ್ಟ್ರೀಯ ಏಕಮಾನ_________
   *a)ಕಿಲೋಮೀಟರ್ b)ಮೀಟರ್ c)ಅಂಗುಲ d)ಅಡಿ*
11. ಸಸ್ಯಗಳು ಆಹಾರ ತಯಾರಿಸುವಾಗ ಬಿಡುಗಡೆ ಮಾಡುವ ಅನಿಲ._________
   *a)ಆಕ್ಸಿಜನ್ b)ನೈಟ್ರೋಜನ್ c)ಕಾರ್ಬನ್ ಡೈ ಆಕ್ಸೈಡ್ d)ಹೈಡ್ರೋಜನ್*

**III ಹೊಂದಿಸಿ ಬರೆಯಿರಿ :-** 5X1=5

| | |
|---|---|
| 12. ಗೋಲ ಮತ್ತು ಗುಳಿ ಕೀಲು | ಕುತ್ತಿಗೆ |
| 13. ಬಿಜಾಗರಿ ಕೀಲು | ಭುಜ ಮತ್ತು ಸೊಂಟ |
| 14. ತಿರುಗಾಣಿ ಕೀಲು | ತಲೆಬುರುಡೆ |
| 15. ಸ್ಥಿರ ಕೀಲು | ಕಶೇರುಕ |
| 16. ಮನುಷ್ಯ | ಮೊಣಕೈ ಮತ್ತು ಮೊಣಕಾಲು |

2023-24

**IV . ಕಾರಣ ಕೊಡಿ.** 2X2=4

17. ಕಾಂತಗಳನ್ನು ಬಿಸಿ ಮಾಡಬಾರದು
18. ವಿದ್ಯುತ್ ಸ್ವಿಚ್ಚನ್ನು ರಿಪೇರಿ ಮಾಡುವಾಗ ಇಲೆಕ್ಟ್ರಿಷಿಯನ್ ರಬ್ಬರ್ ಕೈಗವಸನ್ನು ಬಳಸುತ್ತಾರೆ.

**V. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ** 6X2=12

19. ಜೀವಿಗಳ ಸಾಮಾನ್ಯ ಲಕ್ಷಣಗಳನ್ನು ಪಟ್ಟಿ ಮಾಡಿ
20. ಚಲನೆಯ ವಿಧಗಳನ್ನು ಹೆಸರಿಸಿ ಪ್ರತಿಯೊಂದಕ್ಕೂ ಒಂದು ಉದಾಹರಣೆ ಕೊಡಿ.
21. ಮೋಡಗಳು ಹೇಗೆ ಉಂಟಾಗುತ್ತವೆ?
22. ನೀರಿನ ಬಾಟಲಿಯನ್ನು ರೆಫ್ರಿಜರೇಟರ್‌ನಿಂದ ಹೊರತೆಗೆದು ಇಟ್ಟು ಸ್ವಲ್ಪ ಸಮಯದ ನಂತರ ಆ ಬಾಟಲಿಯ ಮೇಲ್ಮೈನಲ್ಲಿ ನೀರಹನಿಗಳನ್ನು ನೀವು ಗಮನಿಸುವಿರಿ.ಏಕೆ?
23. ಪರ್ವತಾರೋಹಿಗಳು ತಮ್ಮೊಂದಿಗೆ ಆಕ್ಸಿಜನ್ ಸಿಲಿಂಡರ್‌ನ್ನು ತೆಗೆದುಕೊಂಡು ಹೋಗುತ್ತಾರೆ.ಏಕೆ?
24. ಪಾರದರ್ಶಕ ಮತ್ತು ಅಪಾರದರ್ಶಕ ವಸ್ತುಗಳು ಎಂದರೇನು?

**VI. ನಾಲ್ಕು ಐದು ವಾಕ್ಯಗಳಲ್ಲಿ ಉತ್ತರಿಸಿ :-** 4X2=8

25. ಪ್ಲಾಸ್ಟಿಕ್‌ಗಳ ಅತಿ ಬಳಕೆಯನ್ನು ಕಡಿಮೆ ಮಾಡಲು ಮತ್ತು ಕಸವನ್ನು ನಿರ್ವಹಿಸಲು ನೀವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುವಿರಿ?
26. ವಿವಿಧ ಆಕಾರದ ಕೃತಕ ಕಾಂತಗಳ ಚಿತ್ರ ಬರೆದು ಹೆಸರಿಸಿ.

| ಅಂಕ: 40 | ದ್ವಿತೀಯಾ ಸಂಕಲನಾತ್ಮಕ ಮೌಲ್ಯಮಾಪನ 2023–24 | ತರಗತಿ:-6 |
|---|---|---|
| ವಿಷಯ : ವಿಜ್ಞಾನ | ಶಾಲೆ– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ | ಸಮಯ:90 |

ಉತ್ತರ ಕೀಲಿ

**1. ಮೃದ್ವ** **16X1=16**
**2. ವಾತಾವರಣ**
**3. ಜಲ ಆವಾಸ**
**4. ಸ್ವಿಚ್**
**5. ಉತ್ತರ ಮತ್ತು ದಕ್ಷಿಣ**
**6. ಸಾಂದ್ರೀಕರಣ**
**7. ಚಮರೀಮೃಗ**
**8. ಸೂರ್ಯ**
**9. ಕಬ್ಬಿಣ**
**10. ಮೀಟರ್**
**11. ಆಕ್ಸಿಜನ್**
**12. ಭುಜ ಮತ್ತು ಸೊಂಟ**
**13. ಮೊಣಕೈ ಮತ್ತು ಮೊಣಕಾಲು**
**14. ಕುತ್ತಿಗೆ**
**15. ತಲೆಬುರುಡೆ**
**16. ಕಶೇರುಕ**

17.ಏಕೆಂದರೆ ಕಾಂತಗಳನ್ನು ಬಿಸಿ ಮಾಡುವುದರಿಂದ ಅವು ತಮ್ಮ ಕಾಂತತ್ವ ಗುಣವನ್ನು ಕಳೆದುಕೊಳ್ಳುತ್ತವೆ.
18.ಏಕೆಂದರೆ ರಬ್ಬರ್ ಒಂದು ವಿದ್ಯುತ್ ಅವಾಹಕ.ಇದು ವಿದ್ಯುತ್ ಆಘಾತವಾಗುವುದನ್ನು ತಪ್ಪಿಸುತ್ತದೆ.
19. ಆಹಾರ ಸೇವನೆ,ಬೆಳವಣಿಗೆ,ಉಸಿರಾಟ,ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ,ವಿಸರ್ಜನೆ,ಸಂತಾನೋತ್ಪತ್ತಿ ಜೀವಿತಾವಧಿ.
20.1.ಸರಳರೇಖಿಯ ಚಲನೆ ಉದಾ:ನೇರವಾದವ ರಸ್ತೆಯಲ್ಲಿ ಚಲಿಸುವ ಕಾರು 2.ವೃತ್ತೀಯ ಚಲನೆ ಉದಾ:ಫ್ಯಾನಿನ ರೆಕ್ಕೆಗಳು ತರುಗುವುದು.3.ಆವರ್ತಕ ಚಲನೆ ಉದಾ:ಉಯ್ಯಾಲೆಯಲ್ಲಿನ ಮಗುವಿನ ಚಲನೆ.
21. ಭೂಮೇಲ್ಮನಿಂದ ಮೇಲೆ ಹೋದಂತೆ ನೀರಾವಿಯು ತಣ್ಣಗಾಗುತ್ತದೆ. ಸಾಕಷ್ಟು ಎತ್ತರ ತಲುಪಿದ ಮೇಲೆ ಗಾಳಿಯು ಎಷ್ಟು ತಣ್ಣಗಾಗುತ್ತದೆ ಎಂದರೆ ಅದರಲ್ಲಿರುವ ನೀರಾವಿಯು ಸಾಂದ್ರೀಕೃತವಾಗಿ ಕಿರುಹನಿಗಳೆಂದು ಕರೆಯಲಾಗುವ ಸಣ್ಣ ಸಣ್ಣ ನೀರಹನಿಗಳಾಗುತ್ತವೆ. ಈ ಕಿರುಹನಿಗಳೇ ಗಾಳಿಯಲ್ಲಿ ತೇಲುತ್ತಾ ಮೋಡಗಳಂತೆ ಕಾಣುತ್ತವೆ.
22.ಏಕೆಂದರೆ ತಂಪಾದ ನೀರಿನ ಬಾಟಲಿಯು ಸುತ್ತಲಿನ ಗಾಳಿಯನ್ನು ತಂಪು ಮಾಡುವುದರಿಂದ ನೀರಿನ ಹನಿಗಳು ಬಾಟಲಿಯ ಮೇಲೆ ಸಾಂದ್ರೀಕೃತವಾಗುತ್ತವೆ.
23.ಏಕೆಂದರೆ ಭೂಮಿಯ ಮೇಲಕ್ಕೆ ಹೋದಂತೆಲ್ಲ ಗಾಳಿಯು ವಿರಳವಾಗುತ್ತಾ ಹೋಗುತ್ತದೆ.ಅಂದರೆ ಆಕ್ಸಿಜನ್ ಕೊರತೆ ಉಂಟಾಗುತ್ತದೆ.
24.ಯಾವ ವಸ್ತುಗಳು ತಮ್ಮ ಮೂಲಕ ಬೆಳಕನ್ನು ಹಾದುಹೋಗಲು ಬಿಡುತ್ತವೆಯೋ ಅವುಗಳನ್ನು ಪಾರದರ್ಶಕ ವಸ್ತುಗಳು ಎನ್ನುವರು.
ಯಾವ ವಸ್ತುಗಳು ತಮ್ಮ ಮೂಲಕ ಬೆಳಕನ್ನು ಹಾದುಹೋಗಲು ಬಿಡುವುದಿಲ್ಲವೋ ಅವುಗಳನ್ನು ಅಪಾರದರ್ಶಕ ವಸ್ತುಗಳು ಎನ್ನುವರು.
25. 1ತಿಂಡಿತಿನಿಸುಗಳನ್ನು ಸಂಗ್ರಹಿಸಲು ನಾವು ಪ್ಲಾಸ್ಟಿಕ್ಚೀಲಗಳನ್ನು ಬಳಸಬಾರದು. 2.ಪ್ಲಾಸ್ಟಿಕ್ ಚೀಲಗಳನ್ನು ಬಳಸಿದ ನಂತರ ಎಲ್ಲೆಂದರಲ್ಲಿ ನಾವು ಬಿಸಾಡಬಾರದು. 3.ಪ್ಲಾಸ್ಟಿಕ್ಚೀಲ ಮತ್ತು ಪ್ಲಾಸ್ಟಿಕ್ ವಸ್ತುಗಳನ್ನು ನಾವು ಎಂದೂ ಸುಡಬಾರದು.
4.ಪ್ಲಾಸ್ಟಿಕ್ ಚೀಲಗಳಲ್ಲಿ ಕಸವನ್ನು ಹಾಕಿ ನಾವು ಬಿಸಾಡಬಾರದು..ನಾವು ಮನೆಯಲ್ಲಿ ಎರೆಗೊಬ್ಬರವನ್ನು ಬಳಸಬೇಕು ಮತ್ತು ಅಡುಗೆ ತ್ಯಾಜ್ಯವನ್ನು ಉಪಯುಕ್ತವಾಗುವಂತೆ ನಿರ್ವಹಿಸಬೇಕು. 6. ನಾವು ಕಾಗದವನ್ನು ಮರುಚಕ್ರೀಕರಣಗೊಳಿಸಬೇಕು.
**26.ಕಾಂತಗಳ ಚಿತ್ರ**

| ಅಂಕ: 40 | ದ್ವಿತೀಯಾ ಸಂಕಲನಾತ್ಮಕ ಮೌಲ್ಯಮಾಪನ 2023–24 | ತರಗತಿ:-7 |
|---|---|---|
| ವಿಷಯ : ವಿಜ್ಞಾನ | ಶಾಲೆ– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ | ಸಮಯ:90 |

ಉತ್ತರ ಕೀಲಿ

I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. 4X1=4

1. ಅಪಧಮನಿಗಳು
2. ಜವ
3. ಬ್ಯಾಟರಿ
4. ಮಿಥ್ಯ ಪ್ರತಿಬಿಂಬ

II. ಆವರಣದಲ್ಲಿರುವ ಸರಿ ಉತ್ತರವನ್ನು ಆರಿಸಿ ಬರೆಯಿರಿ. 4X1=4

5. ನಿಮ್ನ
6. ಕ್ಸೈಲಂ
7. ಹೂವು
8. ಸೀಮೆಎಣ್ಣೆ

III. ಕೆಳಗಿನ ಜೀವಿಗಳನ್ನು ಅವುಗಳ ಉಸಿರಾಟದ ಅಂಗಗಳೊಂದಿಗೆ ಹೊಂದಿಸಿ ಬರೆಯಿರಿ 4X1=4

| ಜೀವಿಗಳು | ಉಸಿರಾಟದ ಅಂಗ |
|---|---|
| 9. ಜಿರಲೆ | ಸ್ಪೈರಕಲ್ |
| 10. ಎರೆಹುಳು | ಚರ್ಮ |
| 11. ಮೀನು | ಕಿವಿರುಗಳು |
| 12. ಸಸ್ಯ | ಪತ್ರರಂಧ್ರ |

IV. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ 8X2=16

13. ಸಮತಲ ದರ್ಪಣ ಉಂಟುಮಾಡುವ ಪ್ರತಿಬಿಂಬದ ಲಕ್ಷಣಗಳನ್ನು ತಿಳಿಸಿ.

ಪ್ರತಿಬಿಂಬವು ನೇರವಾಗಿರುತ್ತದೆ.

ಮಿಥ್ಯ ಪ್ರತಿಬಿಂಬ ವಸ್ತುವಿನ ಗಾತ್ರದಷ್ಟೇ ಇರುತ್ತದೆ.

ವಸ್ತುವು ದರ್ಪಣದ ಮುಂದೆ ಇರುವಷ್ಟೇ ದೂರದಲ್ಲಿ ಪ್ರತಿಬಿಂಬವು ದರ್ಪಣದ ಹಿಂಭಾಗದಲ್ಲಿ ಉಂಟಾಗುತ್ತದೆ

14. ಅಂತರ್ಜಲ ಮಟ್ಟವು ಕುಸಿಯಲು ಕಾರಣವಾಗುವ ಅಂಶಗಳನ್ನು ಪಟ್ಟಿಮಾಡಿ

ಜನಸಂಖ್ಯೆ ಹೆಚ್ಚಳದಿಂದಾಗಿ ಹೆಚ್ಚಾದ ನೀರಿನ ಬಳಕೆಯಿಂದ, ಹೆಚ್ಚಾದ ಕೈಗಾರಿಕೆಗಳಿಂದಾಗಿ, ಹೆಚ್ಚಾದ ಕೃಷಿ ಚಟುವಟಿಕೆಗಳಿಂದಾಗಿ, ಕಡಿಮೆ ಮಳೆ ಬೀಳುವುದರಿಂದಾಗಿ, ಅರಣ್ಯನಾಶದಿಂದ ಮಳೆನೀರು ಕೊಚ್ಚಿಹೋಗುವಿಕೆಯಿಂದ, ಮೇಲಿನ ಎಲ್ಲಾ ಕಾರಣಗಳಿಂದ ಅಂತರ್ಜಲ ಮಟ್ಟವು ಕುಸಿಯುತ್ತದೆ.

15. ರಕ್ತದ ಘಟಕಗಳು ಯಾವುವು?

ಬಿಳಿ ರಕ್ತ ಕಣಗಳು, ಕೆಂಪುರಕ್ತಕಣಗಳು, ರಕ್ತ ತಟ್ಟೆಗಳು

16. ಸ್ವಕೀಯ ಪರಾಗಸ್ಪರ್ಶ ಹಾಗೂ ಪರಕೀಯ ಪರಾಗಸ್ಪರ್ಶದ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿ

| ಸ್ವಕೀಯ ಪರಾಗಸ್ಪರ್ಶ | ಪರಕೀಯ ಪರಾಗಸ್ಪರ್ಶ |
|---|---|
| ಈ ವಿಧಾನದಲ್ಲಿ ಒಂದು ಹೂವು ಅದೇ ಹೂವಿನ ಅಥವಾ ಅದೇ ಗಿಡದ ಮತ್ತೊಂದು ಹೂವಿನ ಶಲಾಕಾಗ್ರಕ್ಕೆ ಪರಾಗವನ್ನು ವರ್ಗಾವಣೆ ಮಾಡುತ್ತದೆ | ಈ ವಿಧಾನದಲ್ಲಿ ಅದೇ ಜಾತಿಯ ಬೇರೊಂದು ಗಿಡದ ಹೂವಿನ ಶಲಾಕಾಗ್ರಕ್ಕೆ ವರ್ಗಾವಣೆ ಮಾಡುತ್ತದೆ |

| | |
|---|---|
| ಪರಾಗಸ್ಪರ್ಶ ವಾಗಲು ಯಾವ ಏಜೆಂಟ್ಗಳ ಅವಶ್ಯಕತೆ ಇರುವುದಿಲ್ಲ | ಗಾಳಿ ನೀರು ಅಥವಾ ಕೀಟಗಳ ಅವಶ್ಯಕತೆ ಉಂಟು |
| ದ್ವಿಲಿಂಗಿ ಹೂಗಳಲ್ಲಿ ಮಾತ್ರ ಸಾಧ್ಯ | ಏಕಲಿಂಗ ಹೂವುಗಳಲ್ಲಿ ಪರಾಗಸ್ಪರ್ಶ ನಡೆಯುವುದು |
| ವಂಶವಾಹಿಯ ಅನುವಂಶಿಕ ಮಾರ್ಪಾಡು ಆಗುವುದಿಲ್ಲ | ವಂಶವಾಹಿಯ ಅನುವಂಶಿಕ ಮಾರ್ಪಾಡಿಗೆ ಕಾರಣವಾಗುವುದು |

17. ವಿದ್ಯುತ್ಪ್ರವಾಹದ ಯಾವುದಾದರೂ ಎರಡು ಪರಿಣಾಮಗಳನ್ನು ಹೆಸರಿಸಿ

ಉಷ್ಣೋತ್ಪನ್ನ ಪರಿಣಾಮ, ಕಾಂತೀಯ ಪರಿಣಾಮ

18. ಎರಡು ನಿಲ್ದಾಣಗಳ ನಡುವಣ ಅಂತರ 240 ಕಿಲೋಮೀಟರ್. ಒಂದು ರೈಲು ಈ ದೂರವನ್ನು ಕ್ರಮಿಸಲು 4 ಗಂಟೆ ತೆಗೆದುಕೊಂಡರೆ, ರೈಲಿನ ಜವವನ್ನು ಲೆಕ್ಕಹಾಕಿ

$$\text{ರೈಲಿನ ಜವ} = \frac{\text{ಕ್ರಮಿಸಿದ ದೂರ}}{\text{ತೆಗೆದುಕೊಂಡ ಕಾಲ}}$$

$$= \frac{240 \text{ ಕಿ.ಮೀ}}{4\text{ಗಂಟೆ}}$$

=60 ಕಿ.ಮೀ/ ಗಂಟೆ

ರೈಲಿನ ಜವವು 60 ಕಿ.ಮೀ/ ಗಂಟೆ ಆಗಿದೆ

19. ಕಾಡಿನಿಂದ ದೊರಕುವ ಐದು ಉತ್ಪನ್ನಗಳನ್ನು ಹೆಸರಿಸಿ

ಉರುವಲು, ಪೀಠೋಪಕರಣಗಳಿಗೆ, ಮರಮುಟ್ಟು, ಔಷಧೀಯ ವಸ್ತುಗಳು, ಪ್ರಾಣಿಗಳ ಮೇವು, ಅಂಟು, ಎಣ್ಣೆ, ಸಾಂಬಾರು ಪದಾರ್ಥಗಳು ಇತ್ಯಾದಿಗಳು

20. ನಿಮ್ನ ದರ್ಪಣದ ಅನ್ವಯಗಳನ್ನು ಪಟ್ಟಿಮಾಡಿ

ಕಣ್ಣು ಕಿವಿ ಮೂಗು ಮತ್ತು ಗಂಟಲು ಪರೀಕ್ಷಿಸಲು ವೈದ್ಯರು ನಿನ್ನ ದರ್ಪಣವನ್ನು ಬಳಸುತ್ತಾರೆ. ಟಾರ್ಚ್ ಗಳ ಪ್ರತಿ ಫಲಕಗಳು, ಕಾರು ಮತ್ತು ಸ್ಕೂಟರ್ ಗಳ ಮುಂಭಾಗದ ದೀಪಗಳು ಇವುಗಳಲ್ಲಿ ನಿಮ್ನ ದರ್ಪಣಗಳನ್ನು ಬಳಸಲಾಗುತ್ತದೆ.

V. ವೈಜ್ಞಾನಿಕ ಕಾರಣ ಕೊಡಿ :- 2X2=4

21. ನೀರನ್ನು ಮಿತವಾಗಿ ಬಳಸಬೇಕು.

ಭೂಮಿಯ ಮೇಲೆ ನೀರಿನ ಪ್ರಮಾಣ ತುಂಬಾ ಕಡಿಮೆ ಪ್ರಮಾಣದಲ್ಲಿರುವುದರಿಂದ ಮತ್ತು ಕಾಲಕಾಲಕ್ಕೆ ಸರಿಯಾಗಿ ಮಳೆಯ ಬೀಳುವ ಪ್ರಮಾಣ ಕಡಿಮೆ ಆಗಿರುವದರಿಂದ ನೀರಿನ ಅಂತರ್ಜಲ ಮಟ್ಟ ಕುಸಿಯುತ್ತಿದೆ.ಆದ್ದರಿಂದ ನೀರನ್ನು ಮಿತವಾಗಿ ಬಳಸಬೇಕು.

22. ಕಾಡುಗಳನ್ನು ಹಸಿರು ಶ್ವಾಸಕೋಶಗಳು ಎನ್ನುವರು


ಏಕೆಂದರೆ ಸಸ್ಯಗಳು ದ್ಯುತಿ ಸಂಶ್ಲೇಷಣೆ ಪ್ರಕ್ರಿಯೆ ಮೂಲಕ ಆಕ್ಸಿಜನ್ ಅನ್ನು ಬಿಡುಗಡೆ ಮಾಡುತ್ತವೆ ಸಸ್ಯಗಳು ಪ್ರಾಣಿಗಳ ಉಸಿರಾಟಕ್ಕೆ ಆಕ್ಸಿಜನ್ ಒದಗಿಸಲು ನೆರವಾಗುತ್ತದೆ ಅವು ವಾತಾವರಣದಲ್ಲಿ ಆಕ್ಸಿಜನ್ ಮತ್ತು ಕಾರ್ಬನ್ ಡೈಆಕ್ಸೈಡ್ ನ ಸಮತೋಲನ ಕಾಪಾಡುತ್ತವೆ ಅದಕ್ಕಾಗಿಯೇ ಕಾಡುಗಳನ್ನು ಶ್ವಾಸಕೋಶಗಳು ಎಂದು ಕರೆಯಲಾಗುತ್ತದೆ

VI. ಈ ಕೆಳಗಿನ ಪ್ರಶ್ನೆಗಳಿಗೆ 4-5 ವಾಕ್ಯಗಳಲ್ಲಿ ಉತ್ತರಿಸಿ 2X4=8

23. ನೈರ್ಮಲ್ಯತೆಗೆ ಸಂಬಂಧಿಸಿದಂತೆ ಸಕ್ರಿಯ ನಾಗರಿಕರಾಗಿ ನಿಮ್ಮ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿ

ಸಕ್ರಿಯವಾಗಿ ನಾಗರೀಕರಾಗಿ ನಾವು ಉತ್ಪಾದಿಸುವ ತ್ಯಾಜ್ಯದ ಪ್ರಮಾಣವನ್ನು ಮಿತಿ ಗೊಳಿಸಬಹುದು. ನಗರಸಭೆ ಅಥವಾ ಗ್ರಾಮಪಂಚಾಯಿತಿಗಳನ್ನು ಸಂಪರ್ಕಿಸಿ ತೆರೆದ ಚರಂಡಿಗಳನ್ನು ಮುಚ್ಚುವಂತೆ ಒತ್ತಾಯಿಸಬೇಕು. ಯಾವುದೇ ಮನೆಯ ಚರಂಡಿ ನೀರಿನಿಂದ ನೆರೆಹೊರೆಯಲ್ಲಿ ಗಲೀಜು ಉಂಟಾದರೆ ಇತರರ ಆರೋಗ್ಯದ ಬಗ್ಗೆ ಯೋಚಿಸಲು ಆ ಮನೆಯವರನ್ನು ವಿನಂತಿಸಿಕೊಳ್ಳಬೇಕು. ನಮ್ಮ ನೆರೆಹೊರೆಯಲ್ಲಿ ಒಳಗೂ-ಹೊರಗೂ ಸ್ವಚ್ಛತೆಯನ್ನು ಕಾಪಾಡುವ ಹೊಣೆಗಾರಿಕೆ ನಮ್ಮದೆಂದು ತಿಳಿದು ವರ್ತಿಸಬೇಕು ಸ್ವಚ್ಛ ಭಾರತ ಮಿಷನ್ ನ್ನಿನ ಗುರಿಯನ್ನು ಈಡೇರುವಂತೆ ಮಾಡಬೇಕು.

24. ಮಾನವನ ಹೃದಯದ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ



# ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ 2023-24

## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

ತರಗತಿ 7 ಅಂಕಗಳು: 40 ವಿಷಯ: ವಿಜ್ಞಾನ

7th 2nd sem ವಿಜ್ಞಾನ

### 1. ಘಟಕಾವಾರು ಅಂಕ ಹಂಚಿಕೆ

| ಕ್ರ ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 10 | ಜೀವಿಗಳಲ್ಲಿ ಉಸಿರಾಟ | 4 | 4 | 10% |
| 11 | ಪ್ರಾಣಿಗಳು ಮತ್ತು ಸಸ್ಯಗಳಲ್ಲಿ ಸಾಗಾಣಿಕೆ | 4 | 8 | 20% |
| 12 | ಸಸ್ಯಗಳಲ್ಲಿ ಸಂತಾನೋತ್ಪತ್ತಿ | 2 | 3 | 7.5% |
| 13 | ಚಲನೆ ಮತ್ತು ಕಾಲ | 2 | 3 | 7.5% |
| 14 | ವಿದ್ಯುತ್ ಪ್ರವಾಹ ಮತ್ತು ಅದರ ಪರಿಣಾಮಗಳು | 2 | 3 | 7.5% |
| 15 | ಬೆಳಕು | 4 | 6 | 15% |
| 16 | ನೀರು ಒಂದು ಅಮೂಲ್ಯ ಸಂಪನ್ಮೂಲ | 2 | 4 | 10% |
| 17 | ಕಾಡುಗಳು ನಮ್ಮ ಜೀವನಾಡಿ | 3 | 5 | 12.5% |
| 18 | ತ್ಯಾಜ್ಯ ನೀರಿನ ಕಥೆ | 1 | 4 | 10% |
| | | | | |
| | | | | |
| | | | | |
| | | | | |
| | | | | |
| | ಒಟ್ಟು | 24 | 40 | 100% |

### 2. ಉದ್ದೇಶವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 7 | 10 | 25% |
| 2 | ತಿಳುವಳಿಕೆ | 13 | 18 | 45% |
| 3 | ಅಭಿವ್ಯಕ್ತಿ /ಅನ್ವಯ | 3 | 8 | 20% |
| 4 | ಪ್ರಶಂಸೆ / ಕೌಶಲ | 1 | 4 | 10% |
| | ಒಟ್ಟು | 24 | 40 | 100% |

### 3. ಪ್ರಶ್ನಾವಾರು ಅಂಕ ಹಂಚಿಕೆ

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆ | 12 | 12 | 30% |
| 2 | ಕಿರು ಉತ್ತರ ಪ್ರಶ್ನೆ | 10 | 20 | 50% |
| 3 | ದೀರ್ಘ ಉ. ಪ್ರಶ್ನೆ | 2 | 8 | 20% |
| | ಒಟ್ಟು | 24 | 40 | 100% |

### 4. ಕಠಿಣತಾವಾರು ಅಂಕ ಹಂಚಿಕೆ

| ಕ್ರ ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸುಲಭ | 12 | 12 | 30% |
| 2 | ಸಾಧಾರಣ | 10 | 20 | 50% |
| 3 | ಕಠಿಣ | 2 | 8 | 20% |
| | ಒಟ್ಟು | 24 | 40 | 100% |

ನೀಲನಕಾಶೆ